ಈ ಕಾಲದ ಕಥನ

ಕರಣಂ ಪವನ್ ಪ್ರಸಾದ್

# ಪೂರ್ಣ ರಂಜನೆ, ಅರ್ಧ ಸತ್ಯ ಮತ್ತು ಖಾಲಿ ಮೌಲ್ಯ...

ನಾವೀಗ ಕಥನ ಸ್ವರೂಪದ ಬಗ್ಗೆ ಮಾತನಾಡಲು ಹೊರಟಿದ್ದೇವೆ, ಭಾರತದ ಪ್ರಥಮ ಲಭ್ಯ ಸಾಹಿತ್ಯವಾದ ವೇದಗಳಿಂದ ಪ್ರಾರಂಭಿಸೋಣವೇ ಎಂದರೆ ಅದು ಕಥನವಲ್ಲ, ಇಲ್ಲ ಇಲ್ಲ... ಪುರುಷಸೂಕ್ತ ಮುಂತಾದ ಭಾಗಗಳು ಸೃಷ್ಟಿಶೀಲ ಕಥನವೇ ಎನ್ನುತ್ತಾರೆ ಕೆಲವರು. ನನ್ನ ಒಪ್ಪಿಗೆ ಅದಕ್ಕಿಲ್ಲ. ಮನುಷ್ಯ ಬುದ್ಧಿಯಿಂದ ಸ್ಫುರಿಸಲ್ಪಟ್ಟು ಅದಕ್ಕೆ ರಚನಾತ್ಮಕವಾದ ಬಂಧವನ್ನಿಟ್ಟು, ಕಲ್ಪನೆ, ಅಭಿವ್ಯಕ್ತಿ, ವಿಚಾರ ಮುಂತಾದ ಹೊಳಹುಗಳನ್ನು ಮನುಷ್ಯ ಜೀವನವೆಂಬ ಮಸೂರದ ಮೂಲಕ ಸಂಚರಿಸುವಂತೆ ಮಾಡುವುದೇ ಕಥನ. ಆದರೆ ವೇದವು ಪುರುಷ ಬುದ್ಧಿಪ್ರಯತ್ನದಿಂದ ರಚಿತವಾದದ್ದಲ್ಲ!(?) ಎಂದು ಶಂಕರರು ಹೇಳಿದ್ದಾರೆ (ಬೃಹ.ಭಾ.2.4.10) ಹಾಗಾಗಿ ರಾಮಾಯಣವನ್ನು ತೆಗೆದುಕೊಳ್ಳೋಣ. ಅದು ಶುದ್ಧ ಕಾವ್ಯವೇ, ಅದರ ಕಥನ ಸರಳ. ನಾಯಕ, ನಾಯಕಿ ಮತ್ತು ಕೇಡಿ ಇದ್ದಾನೆ, ನಾಯಕಿಯನ್ನು ಕೇಡಿ ಕಿಡ್ನಾಪ್ ಮಾಡುತ್ತಾನೆ, ನಾಯಕ ಕೇಡಿಯನ್ನು ಕೊಂದು ನಾಯಕಿಯನ್ನು ರಕ್ಷಿಸುತ್ತಾನೆ, ಅಷ್ಟೇ! ಉತ್ತರಕಾಂಡ ನನಗೇನೋ ಪ್ರಕ್ಷಿಪ್ತವೇ ಅನ್ನಿಸುತ್ತದೆ. ರಾಮಾಯಣದ ಮಿಕ್ಕೆಲ್ಲವೂ ಈ ಕಥಾ ಎಳೆಗೆ ಪೂರಕ ಮತ್ತು ಪ್ರೇರಕ ಅಂಶವೇ ಹೊರತು ಇನ್ನೊಂದು ಹೊಸ ಆಯಾಮ ಇಲ್ಲ (ವಾಲ್ಮೀಕಿ ರಾಮಾಯಣ ಋಣವಾಗಿಸಿಕೊಂಡರೆ). ಆದರೆ ವ್ಯಾಸ ಮಹಾಭಾರತ ಗಮನಿಸಿದರೆ ಇಷ್ಟು ಸರಳವಾದ ವಿವರಣೆ ಅದಕ್ಕೆ ದೊರಕುವುದಿಲ್ಲ. ಅದು ಸಂಕೀರ್ಣತೆಯನ್ನು ಮೈಗೂಡಿಸಿಕೊಂಡು ಪ್ರತಿ ಅಂಗವೂ ತನ್ನದೇ ಕೊಡುಗೆಯನ್ನು ಕಥನಕ್ಕೆ ನೀಡಿದೆ. ಕಥನ ಎಂದರೆ ಏನು? ಯಾವ ಕಥನ ಸ್ವರೂಪ ನಮ್ಮನ್ನು ಪೊರೆಯಬಲ್ಲದು? ಕಥನದ ಉದ್ದೇಶವೇನು ಎಂಬ ಎಲ್ಲಾ ಪ್ರಶ್ನೆಗೂ ಮಹಾಭಾರತ ಪ್ರಮಾಣಿತ ಉತ್ತರವಾಗಿ ನಿಲ್ಲುತ್ತದೆ. 19ನೇ ಶತಮಾನದವರೆಗೂ ಭಾರತದ ಎಲ್ಲಾ ಕವಿಗಳೂ ಈ ಕಥನ ಸ್ವರೂಪವನ್ನು ದಾಟಿ ಬೇರೇನೂ ಮಾಡಲಿಲ್ಲ ಎಂದು ಕಟುವಾಗಿ ಹೇಳಬೇಕಾಗುತ್ತದೆ. ವಾಲ್ಮೀಕಿ, ವ್ಯಾಸರ ಋಣದಲ್ಲಿದ್ದೇವೆ ಎಂಬುದನ್ನು ಸಂಕೋಚ ಬಿಟ್ಟು ಭಾರತದ ಕವಿಗಳು ಒಪ್ಪಬೇಕು.